ಟಿ.ಎಂ. ಮಾನಪ್ಪ, ಶಿವಮೊಗ್ಗ
*ಮದುವೆ ನಿಶ್ಚಯದಲ್ಲಿ ಉಂಗುರವನ್ನೇಕೆ ಹಾಕಬೇಕು?*



ವಿವಾಹ ಬಂಧನವಾದ್ದರಿಂದ ಕೋಳವನ್ನೇ ಹಾಕಬೇಕಿತ್ತು. ದುಬಾರಿ ಆಗುವುದರಿಂದ ಬೆರಳಿನ ಸಾಂಕೇತಿಕ ದಸ್ತಗಿರಿ.

ಜಯದೇವ ಹಲಕಿ. ಗೋಕಾಕ
*ನಿಮಗೆ ಕೋಟಿ ರೂಪಾಯಿ ಸಿಕ್ಕರೆ ಏನು ಮಾಡುತ್ತೀರಿ?*
ಮೂರ್ಛೆ ಬೀಳುತ್ತೇನೆ. ಎಚ್ಚರವಾದಾಗ ಅದು ಇರುವುದಿಲ್ಲ, ಕನಸು ಎಂದುಕೊಳ್ಳುತ್ತೇನೆ.

ಶಿವಮೊಗ್ಗ ರಮೇಶ್, ಮೈಸೂರು
*ಹೃದಯಕ್ಕೂ, ಕನ್ನಡಿಗೂ ವ್ಯತ್ಯಾಸವೇನು?*
ಕನ್ನಡಿ ಒರಗಿಸಿದರೆ ನಿಲ್ಲುತ್ತದೆ; ಹೃದಯ ನಿಲ್ಲಿಸಿದರೆ ಒರಗುತ್ತಾನೆ.

ಸಂತೇಬೆನ್ನೂರು ಮಂಜಪ್ಪ, ಭದ್ರಾವತಿ
*ವೈರಿಗೆ ಹಿಡಿಶಾಪ ಹಾಕುವವರು ಕಷ್ಟ ಬಂದಾಗ ಯಾವ ವೈರಿಗೂ ಈ ಕಷ್ಟ ಬರಬಾರದು ಎನ್ನುತ್ತಾರಲ್ಲಾ...?*
ಅದೇ ಜೀವನ. ತನಗಿಲ್ಲದ ಸುಖವೇ ಶತ್ರುತ್ವದ ತಾಯಿ. ತನಗಾದ ಕಷ್ಟವೇ ಸಹಬಾಳ್ವೆಯ ಜನನಿ.

ಆರತಿ ಘಟಿಕಾರ್, ದುಬೈ
*ಅಮ್ಮನ ದಿನ ಇದ್ದಂತೆ ಅತ್ತೆಯ ದಿನ ಏಕಿಲ್ಲ ಎಂದು ನಾನಲ್ಲ, ನಮ್ಮ ಅತ್ತೆಯವರು ಕೇಳುತ್ತಿದ್ದಾರೆ. ಉತ್ತರಿಸಿ ರಾಮ್!*




ಇದೆಯಲ್ಲಾ! ಅಕ್ಟೋಬರ್ ಮೂವತ್ತೊಂದು – ಹ್ಯಾಲೋಯಿನ್ಸ್ ಡೇ!

ಬೋ.ಪಾ.ವೆಂಕಟೇಶ್, ಬೋಧನಹೊಸಹಳ್ಳಿ
*ರತ್ನನ ಪದಗಳ ಒಟ್ಟು ಸಾರಾಂಶವೇನು?*
ನಶೆ ಎಷ್ಟೇ ಏರಿದರೂ ದಿಶೆ ಮಾತ್ರ ಇನಿತೂ ತಪ್ಪಬಾರದು ಎಂದು.

ಎಂ.ಎನ್. ಸೋಮಶೇಖರ್. ಮೈಸೂರು
*ಪೆದ್ದಂಭಟ್ಟನಿಗೂ, ಬೆಪ್ಪುತಕ್ಕಡಿಗೂ ಏನು ವ್ಯತ್ಯಾಸ?*
ಅಂದಿನ ದಿನಗಳಿಗೆ ತಕ್ಕ ಭಾಷೆ! ವಿದ್ಯೆ ಹತ್ತದ ಬ್ರಾಹ್ಮಣ ಪೆದ್ದಂ-ಭಟ್ಟ; ವ್ಯವಹಾರ ತಿಳಿಯದ ವೈಶ್ಯ ಬೆಪ್ಪು-ತಕ್ಕಡಿ!

ವಿನೋದ್ ಖಾಟೋಕರ್, ಬೆಂಗಳೂರು
*ರಾಮಾಯಣದ ಕಾಲದಲ್ಲಿ ಮೊಬೈಲ್ ಬಳಕೆ ಇದ್ದಿದ್ದರೆ ಸೀತೆಯನ್ನು ಹುಡುಕಲು ಸುಲಭವಾಗುತ್ತಿತ್ತಲ್ಲವೆ ರಾಂಜಿ?*
ಇಲ್ಲ; ಚಾರ್ಜರ್ ಸಿಕ್ಕಿಸಲು ಅಶೋಕವನದಲ್ಲಿ ಪ್ಲಗ್ ಪಾಯಿಂಟ್ ಇರಲಿಲ್ಲ.

ವಿ. ಹಮೀದ್, ವಿಟ್ಲ
*ಕರಾಟೆ ಕಲಿತ ಹುಡುಗಿಯನ್ನು ಲವ್ ಮಾಡಿದರೆ ತೊಂದರೆಯಾದೀತೆ?*
ಎಚ್ಚರ! ಅವಳು ಹೇಳಿದ್ದಕ್ಕೆಲ್ಲಾ 'ya' 'ಹೂ' ಎನ್ನದಿದ್ದರೆ 'ಯಾ....ಹೂ...' ಎನ್ನುತ್ತಾ ಅಟ್ಯಾಕ್ ಮಾಡಿಯಾಳು!

ಜಿ.ಎನ್. ಸ್ವಾಮಿ, ತುಮಕೂರು
*ಮಂಗ ಮೊದಲೋ, ಮಾನವ ಮೊದಲೋ?*
ಮಂಗ-ಳ ಕುಮಾರನೇ ಮಾನವ!

ಮಲ್ಲಿಕಾರ್ಜುನ. ಹ. ಬಗಲಿ, ಜತ್ತ
*ಹೆಣ್ಣನ್ನು ತವರುಮನೆಯ ಸಸಿ, ಗಂಡನ ಮನೆಯ ಮರ ಎಂದಿರುವುದೇಕೆ?*
ಅಲ್ಲಿ ಅಷ್ಟೇ ಸಣ್ಣ ಇದ್ದು, ಇಲ್ಲಿ ಆ ಪಾಟಿ ಗಾತ್ರ ಆಗುವುದರಿಂದ.

ಶಿವಕುಮಾರ ಪತ್ರಿಮಠ, ಸುರಪೂರ
*ನಮ್ಮ ಬದುಕಿನ ದರ್ಪಣ ಯಾವುದು?*
ಹೆಣ್ಣೇ! ನೀವೇ ಮರೆತರೂ ಮತ್ತೆ ಮತ್ತೆ ನಿಮ್ಮ ಹುಳುಕುಗಳನ್ನು ಎತ್ತಿ ತೋರಿಸುವ ದರ್ಪಣ ಅವಳು.

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ಒಂದೊಮ್ಮೆ ನಮ್ಮ ಬೆನ್ನಿಗೆ ಎರಡು ಕಣ್ಣಿದ್ದಿದ್ದರೆ?*
ವಾಹನಗಳಲ್ಲಿ ಆಕಡೆ, ಈಕಡೆ ಕನ್ನಡಿಯೇ ಇರುತ್ತಿರಲಿಲ್ಲ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಗುರುರಾಜಲು ನಾಯ್ಡು ಹೇಳುತ್ತಿದ್ದ ಹರಿಕಥೆಗೂ, ಮುಖ್ಯಮಂತ್ರಿಗಳ ಭಾಷಣಕ್ಕೂ ಏನು ವ್ಯತ್ಯಾಸ?*
ಅವರ ಹರಿಕಥೆಯಲ್ಲಿ ಇರುತ್ತಿದ್ದುದು ಕಳೆ; ಇವರದರಲ್ಲಿ ಬೊಕಳೆ.

## ಬಹುಮಾನಿತ ಪ್ರಶ್ನೆ

ಕೆ.ವೇದಶ್ರೀ, ಬೆಂಗಳೂರು
*ಪಾತಿವ್ರತ್ಯದ ಬಗ್ಗೆ ಉಪನ್ಯಾಸ ನೀಡುವವಳೊಬ್ಬಳು ತನ್ನ ಪತಿದೇವರಿಂದ ವಿಚ್ಛೇದನ ಕೋರಿದ್ದಾಳಲ್ಲಾ...?*
ತಿಳಿಯಿತು. ಆಕೆ ಒರೆಸುವ ಬಟ್ಟೆಯಂತೆ. ಒರೆಸಲ್ಪಟ್ಟದ್ದು ಶುಭ್ರ, ಒರೆಸಿದ್ದು ಕೊಳಕು!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಮದುವೆಯಾದವಳನ್ನು ಕೈ ಹಿಡಿದವಳು ಅಂತಾರೆ. ಪ್ರೀತಿಸಿದವಳನ್ನು?*
boy ಹಿಡಿದವಳು!

ಎಂ.ಎನ್. ಪ್ರಭಾಕರ, ಬೇವಿನಕಟ್ಟೆ
*ಕಿತ್ತೂರು ರಾಣಿ ಚನ್ನಮ್ಮನಂತಹವರು ಮತ್ತೆ ಏಕೆ ಹುಟ್ಟಲಿಲ್ಲ?*
ಹುಟ್ಟಿದ್ದಾರೆ ಸಾರ್; 'ನಿಮಗೇಕೆ ಕೊಡಬೇಕು ಕಪ್ಪ?' ಎನ್ನುತ್ತಾ ಕಪ್ಪಿನಲ್ಲಿರುವುದೆಲ್ಲಾ ತಾನೇ ಕುಡಿಯುವ ಹೆಣ್ಣುಗಳು ಇದ್ದಾರೆ.

ಮೋಹನರಾಜು. ಎಸ್.ಎ., ಶಿವಮೊಗ್ಗ
*ಕಿರುತೆರೆಗೂ, ಹಿರಿತೆರೆಗೂ ನಡುವಿನ ವ್ಯತ್ಯಾಸ ತಿಳಿಸಿ ರಾಮ್‌ಜೀ?*



ನಡು ಕಿರಿದಾಗಿದ್ದಾಗ ಹಿರಿತೆರೆ; ನಡು ಹಿರಿದಾಗುತ್ತಿದ್ದಂತೆ ಕಿರುತೆರೆ!

ಅಕ್ಷಯ ಜೈನ್, ಶ್ರವಣಬೆಳಗೊಳ
*ಆತ್ಮವಿಕಾಸದ ಜೀವನದ ಉತ್ತರಪಥದಲ್ಲಿ ಸಾಗಿರುವ ನಿಮಗೇಕೆ ಇನ್ನೂ ಡಾಕ್ಟರೇಟ್ ಪದವಿ ಲಭಿಸಿಲ್ಲ ಸಾರ್?*
ಇತ್ತೀಚೆಗೆ 'ರೇಟ್' ತುಂಬಾ ಜಾಸ್ತಿ ಆಗಿದೆಯಂತೆ ಕಣ್ರಿ...

ಕೆ.ಜಿ. ಶೇಖರಪ್ಪ, ಅರಸೀಕೆರೆ
*ಈ ಮೋಸದ ಜಗತ್ತಿಗೆ ಪ್ರಕೃತಿಯೇ ನೀಡುತ್ತಿರುವ ಶಿಕ್ಷೆಯೇ ಸರಿ ಎನಿಸಿದೆ. ತಾವು ಏನಂತೀರಾ ಸಾರ್?*
ಛೆ! ಮೋದಿಗೆ ನಿಮ್ಮಷ್ಟೇ ಜ್ಞಾನ ಇದ್ದಿದ್ದರೆ ನೇಪಾಳದಲ್ಲಿ ಜನರನ್ನು ಬಚಾವ್ ಮಾಡುವುದೇ ತಪ್ಪುತ್ತಿತ್ತು!

■ ರಾಮ್